ಪ್ರಾಸಾ-2 ರವರನ್ನು ದಿಃ 10.03.2026 ರಂದು ಪುನಃ ಕರೆಯಿಸಲಾಯಿತು ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲು ಆರೋಪಿತರ ಪರವಾಗಿ ಶ್ರೀ. ಎಸ್.ಎ.ಕ್ಯೂ. ವಕೀಲರಿಂದ

2. ಮದುವೆಗಿಂತ ಪೂರ್ವದಲ್ಲಿ ನಾವು ಮತ್ತು ಲಚಮಯ್ಯನ ಮನೆಯವರು ಕುಳಿತು ಮಾತಾನಾಡಿ ಮದುವೆ ಮಾಡಿರುತ್ತೇವೆ. ಆರೋಪಿ ಲಚಮಯ್ಯನಿಗೆ ಈಗ ಎರಡನೇ ಮದುವೆ ಆಗಿದ್ದು ಅದೇ ರೀತಿ ಈಗ ನನ್ನ ಮಗಳಿಗೂ ಸಹ ಎರಡನೇ ಮದುವೆ ಆಗಿರುತ್ತದೆ ಎಂದರೆ ಸರಿ. ಮದುವೆ ಆದ ಮೇಲೆ ನಾವು ಲಚಮಯ್ಯನ ಮನೆಗೆ ಹೋಗುವುದು ಲಚಮಯ್ಯ ನಮ್ಮ ಮನೆಗೆ ಬರುವುದು ಮಾಡುತ್ತಿದ್ದ ಎಂದರೆ ಸರಿ. ನಮ್ಮ ಊರಿನಿಂದ ತೋರಣತಿಪ್ಪ ಎಷ್ಟು ಕಿ.ಮೀಟರ ದೂರ ಇರುತ್ತದೆ ಎನ್ನುವುದಕ್ಕೆ ಸಾಕ್ಷಿದಾರರು ಎಷ್ಟು ದೂರು ಇರುತ್ತದೆ ಎಂದರೆ ದ್ವಿಚಕ್ರ ವಾಹನದಲ್ಲಿ ಹೋದರೆ 45 ನಿಮೀಷ ಬೇಕಾಗುತ್ತದೆ ಬಸ್ಸಿನಲ್ಲಿ ಹೋದರೆ 1 ಗಂಟೆ ಬೇಕಾಗುತ್ತದೆ ಎಂದು ನುಡಿಯುತ್ತಾರೆ. ನನ್ನ ಮಗಳಿಗೆ ಮೊದಲನೆ ಗಂಡನಿಂದ ಒಂದು ಹೆಣ್ಣು ಮಗು ಇರುತ್ತದೆ. ನನ್ನ ಮಗಳಿಗೆ ಮೊದಲನೆ ಹೆರಿಗೆ ಆದ ಮೇಲೆ ಹೊಟ್ಟೆ ನೋವು ಇತ್ತು ಎಂದರೆ ಸರಿಯಲ್ಲ. ಆರೋಪಿ ಅನೇಕ ಸಾರಿ ತೋರಿಸಿದರು ಸಹ ಹೊಟ್ಟೆ ನೋವು ಕಡಿಮೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿದಾರರು ನನ್ನ ಮಗಳಿಗೆ ಹೊಟ್ಟೆ ನೋವು ಇರಲಿಲ್ಲ ಎಂದು ನುಡಿಯುತ್ತಾರೆ. ಆಗಾಗಿ ನನ್ನ ಮಗಳು ಯಾವಾಗಲೂ ನನ್ನ ಮನೆಯಲ್ಲಿಯೇ ಇರುತ್ತಿದ್ದಳು ಎಂದರೆ ಸರಿಯಲ್ಲ. ನನ್ನ ಮಗಳಿಗೆ ಹೊಟ್ಟೆ ನೋವು ಇರುವುದರಿಂದ ಆರೋಪಿ ನಮ್ಮ ಊರಿಗೆ ಬಂದು ಹೋಗುವುದು ಮಾಡುತ್ತಿದ್ದ ಎಂದರೆ ಸರಿಯಲ್ಲ. ನನ್ನ ಮಗಳು ಮೃತಪಟುವುದಕ್ಕಿಂತ ಒಂದುವರೆ ವರ್ಷಕ್ಕಿಂತ ಮುಂಚೆ ನನ್ನೊಂದಿಗೆ ಇದ್ದಳು ಎಂದರೆ ಸರಿಯಲ್ಲ. ಅರೋಪಿಗೆ ನಾನು ಒಂದು ಲಕ್ಷ ರೂಪಾಯಿ ಕೊಟ್ಟ ಬಗ್ಗೆ ಆರೋಪಿಯಿಂದ ನಾನು ಯಾವುದೇ ದಾಖಲೆ ಬರೆಯಿಸಿಕೊಂಡಿರುವುದಿಲ್ಲ. ಆರೋಪಿ ನನ್ನ ಮಗಳಿಗೆ ತೊಂದರೆ ಕೊಡುತ್ತಿರುವುದರ ಬಗ್ಗೆ ಪಂಚಾಯಿತಿ ಮಾಡಿರುವುದಿಲ್ಲ. ಆಗ ನಮ್ಮ ಮಗಳು ನಮ್ಮ ಮನೆಯಲ್ಲಿ ಇದ್ದಳು ಎಂದು ಸಾಕ್ಷಿದಾರರು ಸ್ವತಃ ಹೇಳುತ್ತಾರೆ.

2. ಆರೋಪಿ ನನ್ನ ಮಗಳ ಬಗ್ಗೆ ಸಂಸಯ ಪಡುತ್ತಿದ್ದ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಮಗಳಿಗೆ ಇಷ್ಟ ಇಲ್ಲದಿದ್ದರು ಸಹ ಆರೋಪಿ ಲಚಮಯ್ಯನೊಂದಿಗೆ ಒತ್ತಾಯ ಪೂರ್ವಕವಾಗಿ ಮದುವೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನನ್ನ ಒತ್ತಾಯದ ಮೇರೆಗೆ ನನ್ನ ಮಗಳು ಆರೋಪಿಯನ್ನು ಮದುವೆ ಆಗಿದ್ದಳು ಎಂದರೆ ಸರಿಯಲ್ಲ. ಆಗಾಗಿ ನನ್ನ ಮಗಳಿಗೆ ಲಚಮಯ್ಯನೊಂದಿಗೆ ಸಂಸಾರ ಮಾಡಲು ಇಚ್ಛೆ ಇರಲಿಲ್ಲ ಎಂದರೆ ಸರಿಯಲ್ಲ. ಆಗಾಗಿ ನಮ್ಮ ಮಗಳು ನಮ್ಮ ಮನೆಯಲ್ಲಿ ಬಂದು ಇದ್ದಳು ಎಂದರೆ ಸರಿಯಲ್ಲ. ಆರೋಪಿ ನಮ್ಮ ಮನೆಗೆ ಅನೇಕ ಸಾರಿ ಬಂದು ನನ್ನ ಮಗಳನ್ನು ತನ್ನ ಮನೆಗೆ ಕರೆದುಕೊಂಡು ಹೋಗಲು ಬಂದಿರುತ್ತಾನೆ ಎಂದರೆ ಸರಿಯಲ್ಲ. ಅನಿತಾ ಮತ್ತು ಆರೋಪಿ ದುಡಿದುಕೊಂಡು ತಿನ್ನಲು ಗುಜರಾತ ರಾಜ್ಯದ ಸುರತ್‌ಗೆ ಹೋಗಿದ್ದರು ಎಂದು ಈ ವಿಷಯವನ್ನು ನನ್ನ ದೂರಿನಲ್ಲಿ ಹೇಳಿರುವುದಿಲ್ಲ ಎಂದರೆ ಸರಿ. ಆರೋಪಿ ತನ್ನ ಅಣ್ಣನಿಂದ ರೂ. 1,00,000/- ಸಾಲ ಮಾಡಿದ್ದನು. ಆರೋಪಿಯು ನನಗೆ ರೂ.1,00,000/- ಕೊಡುವಂತೆ ಆ ಸಾಲವನ್ನು ತಿರಿಸುತ್ತೇನೆ ಮತ್ತು ಬೆಂಗಳೂರಿಗೆ ಹೋಗಿ ದುಡಿದುಕೊಂಡು ವಾಸವಾಗಿರುತ್ತೇವೆ ಎಂದು ತಿಳಿಸಿರುತ್ತಾನೆ ಎಂದು ನಾನು ನನ್ನ ದೂರಿನಲ್ಲಿ ಹೇಳಿರುವುದಿಲ್ಲ ಎಂದರೆ ಸರಿ. ಬೇರೆಯವರಿಂದ ರೂ.50,000/- ಮತ್ತು ರೂ.50,000/- ಈಗೆ ಒಂದು ಲಕ್ಷ ರೂಪಾಯಿ ತೆಗೆದುಕೊಂಡು ಆರೋಪಿಯ ತಂದೆಯನ್ನು ಕರೆದುಕೊಂಡು ಸುರತಗೆ ಹೋಗಿರುತ್ತೇನೆ ಎಂದು ನನ್ನ ದೂರಿನಲ್ಲಿ ಬರೆದಿರುವುದಿಲ್ಲ ಎಂದರೆ ಸರಿ.

3. ಆರೋಪಿಯ ತಂದೆಯನ್ನು ಕರೆದುಕೊಂಡು ಸುರತಗೆ ಹೋಗಿರುತ್ತೇನೆ. ನಾನು ಹೋದ ಮೇಲೆ ನನ್ನ ಮಗಳು ಮತ್ತು ಆರೋಪಿ ಬಂದಿರುತ್ತಾನೆ. ನಾನು ಹಣ ಕೊಡಬೇಕು ಎನ್ನುವಷ್ಟರಲ್ಲಿ ಬಾತ್‌ರೂಮಿಗೆ ಹೋಗಿ ಮಾತ್ರೆ ಸೇವಿಸಿರುತ್ತಾಳೆ. ಅವರು ಏನು ಜಗಳ ಆಡಿಕೊಂಡಿದ್ದರು ಎಂದು ನನಗೆ ಗೊತ್ತಿರುವುದಿಲ್ಲ, ಆಸ್ಪತ್ರೆಗೆ ಹೋಗಿ ನನ್ನ ಮಗಳು ಚಿಕಿತ್ಸೆ ಪಡೆದುಕೊಂಡು ಬಂದ ಮೇಲೆ ನನ್ನ ಮಗಳು  ನಾನು ನನ್ನ ಮಗಳಿಗೆ ನಾನು ತಂದಂತಹ ರೂ.1,00,000/- ಕೊಡುವುದು ಬೇಡವೊ ಅಂತಾ ಕೇಳಿದಾಗ ನನ್ನ ಮಗಳು ಕೊಡು ನಾವು ಬೆಂಗಳೂರಿಗೆ ಹೋಗಿ ದುಡಿದು ವಾಪಸ್ಸು ಕೊಡುತ್ತೇವೆ ಎಂದು ಹೇಳಿರುತ್ತಾಳೆ ಎಂದು ನನ್ನ ದೂರಿನಲ್ಲಿ ಹೇಳಿರುವುದಿಲ್ಲ ಎಂದರೆ ಸರಿ. ಹೀಗೆ 6

ವರ್ಷದ ಹಿಂದೆ ನಾನು ಬೆಂಗಳೂರಿಗೆ ಹೋಗಿದ್ದು ನನ್ನ ಮಗಳು ಮಧ್ಯಾಹ್ನ 3.00 ಗಂಟೆಯವರೆಗೆ ಕೆಲಸ ಮಾಡಿ ನನ್ನ ಮನೆಗೆ ನನ್ನ ಮಗಳು ಬಂದಿದ್ದು ಆಕೆಗೆ ಫೋನ ಮಾಡಿರುತ್ತೇನೆ, ನನ್ನ ಮಗಳು ಟಾರ್ಚರ ತಾಳಲಾರದೆ ವರ್ಕನಳ್ಳಿ ಗ್ರಾಮದ ನನ್ನ ಮನೆಯಲ್ಲಿ ಸೀರೆಯಿಂದ ನೇಣು ಹಾಕಿಕೊಂಡಿರುತ್ತಾಳೆ ಎಂದು ನಾನು ದೂರಿನಲ್ಲಿ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮಗಳು ಮೂತ್ರ ಮಾಡುವ ಕಾಲಕ್ಕೆ ಬಿಳಿ ಮೂತ್ರ ಹೊಂದಿದ್ದು ಹಾಗೂ ಹೊಟ್ಟೆ ನೋವು ತಾಳಲಾರದೆ ನನ್ನ ಮಗಳು ಆತ್ಯಹತ್ಯೆ ಮಾಡಿಕೊಂಡಿರುತ್ತಾಳೆ ಎಂದರೆ ಸರಿಯಲ್ಲ. ಈ ರೀತಿ ನಾನು ಪೊಲೀಸರ ಮುಂದೆ ಹೇಳಿರುವುದಿಲ್ಲ ಏಕೆಂದರೆ ನನ್ನ ಮಗಳು ಮೃತಪಟ್ಟಿದ್ದರಿಂದ ನಾು ಆಘಾತಕ್ಕೆ ಒಳಗಾಗಿದ್ದೆ ಎಂದು ನುಡಿಯುತ್ತಾರೆ. ನನ್ನ ಮಗಳು ಮೃತಪಟ್ಟು ಸುಮಾರು 6 ವರ್ಷಗಳು ಆಗಿರುತ್ತದೆ. ನಾನು ಈ ನ್ಯಾಯಾಲಯಕ್ಕೆ ಈ ಮುಂಚೆ 3 ತಿಂಗಳ ಹಿಂದೆ ಸಾಕ್ಷಿ ಕೊಟ್ಟಿರುತ್ತೇನೆ. ಈ ಎಲ್ಲ ವಿಷಯವನ್ನು ನಾನು ಪೊಲೀಸರ ಮುಂದೆ ಹೇಳಿರುವುದಿಲ್ಲ ಏಕೆಂದರೆ ನಿನ್ನ ರಿಪೂರ್ಟ ಕೊರ್ಟಿಗೆ ಹೋಗಿರುತ್ತದೆ ನೀನು ಕೊರ್ಟೀಗೆ ಹೋಗಿ ಸಾಕ್ಷಿ ಹೇಳು ಎಂದು ಹೇಳಿರುತ್ತಾರೆ. ಇಂದಿನವರೆಗೆ ನನ್ನ ಮಗಳು ಮೃತಪಟ್ಟಿದ್ದು ನೋವು ಇರುತ್ತದೆ. ನಾನು ಅಂಗನವಾಡಿ ಸಹಾಯಕಿ ಆಗಿ ಇರುತ್ತೇನೆ. ನನಗೆ ಓದಲೂ ಬರೆಯಲು ಬರುವುದಿಲ್ಲ. ನನ್ನ ಮಗಳು ಮೃತಪಟ್ಟು 3 ವರ್ಷಗಳವರೆಗೆ ಕೆಲಸ ಬಿಟ್ಟುರುತ್ತೇನೆ. ಈ 6 ವರ್ಷದಲ್ಲಿ ನಾನು ನನ್ನ ಸಂಸಾರವನ್ನು ಹೆಚ್ಚು ಕಡಿಮೆಯನ್ನು ಎಲ್ಲ ನಾನೇ ಮಾಡಿಕೊಂಡು ಹೋಗಿರುತ್ತೇನೆ. ಕೇಸು ಮಾಡಿದರೆ ನ್ಯಾಯಾ ಸಿಗುತ್ತದೆ ಎಂದು ನನಗೆ ಗೊತ್ತಿರುತ್ತದೆ. ಕೇಸು ಮಾಡಿದರೆ ಅದಕ್ಕೆ ತಕ್ಕಂತೆ ನ್ಯಾಯಾ ಸಿಗುತ್ತದೆ ಎಂದು ನನಗೆ ಗೊತ್ತಿರುತ್ತದೆ. ನನ್ನ ಮಗಳು ಹಾಗೂ ಆರೋಪಿ ದುಡಿದು ತಿನ್ನಲು ಗುಜರಾತನ ಸುರತಗೆ ಹೋಗಿದ್ದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ತನ್ನ ಅಣ್ಣನಿಂದ ರೂ. 1,00,000/- ಸಾಲ ಮಾಡಿದ್ದನು. ಆರೋಪಿಯು ನನಗೆ ರೂ.1,00,000/- ಕೊಡುವಂತೆ ಆ ಸಾಲವನ್ನು ತಿರಿಸುತ್ತೇನೆ ಮತ್ತು ಬೆಂಗಳೂರಿಗೆ ಹೋಗಿ ದುಡಿದುಕೊಂಡು ವಾಸವಾಗಿರುತ್ತೇವೆ ಎಂದು ತಿಳಿಸಿರುತ್ತಾನೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಬೇರೆಯವರಿಂದ ರೂ.50,000/- ಮತ್ತು ರೂ.50,000/- ಈಗೆ ಒಂದು ಲಕ್ಷ

ರೂಪಾಯಿ ತೆಗೆದುಕೊಂಡು ಆರೋಪಿಯ ತಂದೆಯನ್ನು ಕರೆದುಕೊಂಡು ಸುರತಗೆ ಹೋಗಿರುತ್ತೇನೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆಗ ನಾನು ನನ್ನ ಮಗಳನ್ನು ವರ್ಕನಳ್ಳಿಗೆ ಕರೆದುಕೊಂಡು ಬಂದಿರುತ್ತೇನೆ. ಆರೋಪಿ ನನ್ನ ಮಗಳ ಶೀಲದ ಮೇಲೆ ಶಂಕೆ ವ್ಯಕ್ತಪಡಿಸಿ ಬೇರೆಯವರ ಜೊತೆ ನೀನು ಇದ್ದಿ, ಅವರಿಗೆ ಪೋನ ಮಾಡುತ್ತಿ ಇವರಿಗೆ ಪೋನ ಮಾಡುತ್ತಿ ಎಂದು ಆರೋಪಿ ಹೇಳುತ್ತಿದ್ದನು ಎಂದು ನನ್ನ ಮಗಳು ನನಗೆ ತಿಳಿಸಿರುತ್ತಾಳೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಗಳು ನಾನು ಕೊಟ್ಟಂತಹ ರೂ.1,00,000/- ಹಣವನ್ನು ಮರಳಿ ಕೊಡು ಅಂತಾ ಹೇಳಿದಾಗ ಆರೋಪಿ ಅನಿತಾಳಿಗೆ ಹೊಡೆಬಡಿ ಮಾಡಿರುತ್ತಾನೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತನ ಆಗದವರ ಮಾತು ಕೇಳಿ ನಾನು ಸುಳ್ಳು ದೂರು ಕೊಟ್ಟು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹೀಗೆ 6 ವರ್ಷದ ಹಿಂದೆ ನಾನು ಬೆಂಗಳೂರಿಗೆ ಹೋಗಿದ್ದು ನನ್ನ ಮಗಳು ಮಧ್ಯಾಹ್ನ 3.00 ಗಂಟೆಯವರೆಗೆ ಕೆಲಸ ಮಾಡಿ ನನ್ನ ಮನೆಗೆ ನನ್ನ ಮಗಳು ಬಂದಿದ್ದು ಆಕೆಗೆ ಪೋನ ಮಾಡಿರುತ್ತೇನೆ. ನನ್ನ ಮಗಳು ಟಾರ್ಚರ ತಾಳಲಾರದೆ ವರ್ಕನಳ್ಳಿ ಗ್ರಾಮದ ನನ್ನ ಮನೆಯಲ್ಲಿ ಸೀರೆಯಿಂದ ನೇಣು ಹಾಕಿಕೊಂಡಿರುತ್ತಾಳೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆ ಇಲ್ಲ.</u>

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಯಾದಗಿರಿ.